ಪ್ರಾರ್ಥನೆ

# ಶ್ರೀ ಲಕ್ಷ್ಮೀನೃಸಿಂಹ ಸ್ತೋತ್ರದಿಂದ



**ಸಂಸಾರ ಘೋರ ಗಹನೇ ಚರತೋ ಮುರಾರೇ ।**
**ಮಾರೋಗ್ರಭೀಕರಮೃಗ ಪ್ರವರಾರ್ದಿತಸ್ಯ ॥**
**ಆರ್ತಸ್ಯ ಮತ್ಸರನಿದಾಘನಿಪೀಡಿತಸ್ಯ ।**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೧ ॥**

ಮುರಾರಿ, ಶ್ರೀ ಲಕ್ಷ್ಮೀನೃಸಿಂಹ, ಸಂಸಾರ ಭೀಕರ ಗಹನ ವನದಲ್ಲಿ ಸಂಚರಿಸುವ, ಉಗ್ರ ಭಯಂಕರ ಕೇಸರಿಯಂತಿರುವ ಕಾಮನಿಂದ ಪೀಡಿತನಾದ, ಮತ್ಸರದ ಬೆಂಕಿಯಿಂದ ಪೀಡಿತನಾದ ನನಗೆ ನಿನ್ನ ಕೈಗಳ ಆಶ್ರಯವನ್ನು ಕೊಡು.

**ಸಂಸಾರಕೂಪಮತಿಘೋರಮಗಾಧಮೂಲಂ ।**
**ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ ॥**
**ದೀನಸ್ಯ ದೇವ ಕೃಪಣಾಪದಮಾಗತಸ್ಯ ।**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೨ ॥**

ದೇವನೇ, ಸಂಸಾರರೂಪಿ ಅತಿ ಘೋರ ಕೂಪದ ಅತ್ಯಂತ ತಲವನ್ನು ತಲುಪಿ, ಅನೇಕ ಸರ್ಪಗಳು ಒಟ್ಟಿಗೆ ಕಚ್ಚಿದಷ್ಟು ದುಃಖದಿಂದ ಬಳಲಿ ದೀನನಾದ, ಕೃಪಣನಾದ ನನಗೆ ಶ್ರೀ ಲಕ್ಷ್ಮೀನೃಸಿಂಹನೆ, ನಿನ್ನ ಕರಗಳ ಆಶ್ರಯವನ್ನು ಕೊಡು.

**ಸಂಸಾರ ಸಾಗರ ವಿಶಾಲ ಕರಾಲಕಾಲ ।**
**ನಕ್ರಗ್ರಹಗ್ರಸನ ನಿಗ್ರಹ ವಿಗ್ರಹಸ್ಯ ॥**
**ವ್ಯಗ್ರಸ್ಯ ರಾಗರಸನೋರ್ಮಿನಿಪೀಡಿತಸ್ಯ ।**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೩ ॥**

ಸಂಸಾರ ಸಾಗರದಲ್ಲಿ ದೊಡ್ಡ ಭೀಕರ ಮೊಸಳೆಯ (ಕಾಲನ) ಹಿಡಿತದಿಂದ ಬಂಧಿತನಾದ, ವ್ಯಾಕುಲದೇಹದ, ಆಸಕ್ತಿಯೆಂಬ ತೆರೆಗಳ ಹೊಡೆತದಿಂದ ಪೀಡಿತನಾದ ನನಗೆ ಶ್ರೀ ಲಕ್ಷ್ಮೀನೃಸಿಂಹನೆ, ನಿನ್ನ ಕೈಗಳ ಆಶ್ರಯವನ್ನು ನೀಡು.

— ಶ್ರೀ ಶಂಕರಾಚಾರ್ಯ

ಸೂಕ್ತಿಪ್ರಭ

## ದಿವ್ಯ ಸೂಕ್ತಿಗಳು

**ಆ**ತ್ಮಾರ್ಪಣೆ! ಆತ್ಮಾರ್ಪಣೆ! ಆತ್ಮಾರ್ಪಣೆಗೆ ಇದೇ ದಾರಿ. ಬೇರೆ ದಾರಿಯೇ ಇಲ್ಲ. ಕಲಿಯುಗದಲ್ಲಿ ಮನುಷ್ಯನ ಪ್ರಾಣ ಅನ್ನದ ಮೇಲೆ ಇರುವುದು. ಅವನ ಆಯುಸ್ಸು ಅಲ್ಪ. ಈ ಅಲ್ಪ ಅವಕಾಶದಲ್ಲಿ ಅವನು ಎಷ್ಟೋ ಮಾಡಬೇಕಾಗಿದೆ. ಭಗವಂತನ ಸಾಕ್ಷಾತ್ಕಾರಕ್ಕೆ ಬೇಕಾಗುವ ಶಕ್ತಿ, ತ್ಯಾಗ, ಧೈರ್ಯ, ತಪಸ್ಸು ಇರುವುದು ಬಹಳ ಕಡಿಮೆ. ಅವನ ಮನಸ್ಸು ದುರ್ಬಲ. ಸ್ವಾಭಾವಿಕವಾಗಿ ಭೋಗವಸ್ತುಗಳನ್ನು ಹುಡುಕಿಕೊಂಡು ಹೋಗುವುದು. ಆದರೂ ದೇವರನ್ನು ಕಾಣಬೇಕಾಗಿದೆ. ಭಗವಂತನ ಸಾಕ್ಷಾತ್ಕಾರವಿಲ್ಲದೆ ಇದ್ದರೆ ಅವನ ಬಾಳು ವ್ಯರ್ಥ. ಯಾವ ಸಾರ್ಥಕವಾದುದನ್ನೂ ಸಾಧಿಸದೆ ಮನುಷ್ಯ ಜಗತ್ತಿಗೆ ಬರುವನು ಹೋಗುವನು. ದೇವರನ್ನು ಮಾನವ ಪಡೆಯಬೇಕು. ಆತ್ಮಾರ್ಪಣೆಗಿಂತ ಸುಲಭ ಮಾರ್ಗವಿಲ್ಲ.

— ಸ್ವಾಮಿ ಬ್ರಹ್ಮಾನಂದ

**ಎ**ಲ್ಲಿಯವರೆಗೆ ಆಸಕ್ತಿಯಿರುವುದೋ ಅಲ್ಲಿಯವರೆಗೆ ಕಲ್ಪನೆಗಳೂ ಇರುವುವು. ಕಲ್ಪನೆಗಳನ್ನು (imaginations) ನಿಲ್ಲಿಸು, ಆಗ ನೋಡುವೆ, ನಿಮ್ಮ ಕಾಮಿನೀ-ಕಾಂಚನಾಸಕ್ತಿಯೂ ಓಡಿಹೋಗುವುದು. ಆದರೆ ಕಲ್ಪನೆಗಳು ಅಷ್ಟು ಸುಲಭವಾಗಿ ನಿಲ್ಲುವವೆ? ಭಗವನ್ನಾಮದಲ್ಲಿ ಮೈಮರೆಯದಿದ್ದರೆ ಕಲ್ಪನೆಗಳು ಬಿಟ್ಟು ಹೋಗುವುದಿಲ್ಲ.

— ಸ್ವಾಮಿ ಅದ್ಭುತಾನಂದ

**ಹೃ**ದಯಪೂರ್ವಕವಾಗಿ ನೀನು ದೇವರನ್ನು ಪ್ರಾರ್ಥಿಸುತ್ತಾ ಹೋಗು. ನಿನಗೆ ಗುರುವಿನ ಅಗತ್ಯವಿರುವುದೇ ಆದಲ್ಲಿ, ದೇವರು ನಿನಗೆ ಬೇಕಾಗಿರುವ ಅಂಥ ಯಾರೋ ಒಬ್ಬ ಗುರುವನ್ನು ನಿನ್ನ ಬಳಿಗೆ ಕಳುಹಿಸಿಕೊಡುವನು.

— ಸ್ವಾಮಿ ತ್ರಿಗುಣಾತೀತಾನಂದ